# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## *ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 13-02-2017ರಂದು ನಡೆದ ಸಭೆಯ ನಡವಳಿಗಳು*

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಎಂ.ಕೆ.ಗುಣಶೇಖರ್ – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಬಿ.ಎನ್.ನಿತೀಶ್ ಪುರುಶೋತ್ತಮ – ಸದಸ್ಯರು | ಕಾನೂನು ಕೋಶಾಧಿಕಾರಿ, |
| ಕೆ.ಎಂ.ಮಮತ – ಸದಸ್ಯರು | ಜಂಟಿ ಆಯುಕ್ತರು / ಉಪ ಆಯುಕ್ತರು (ಕಂದಾಯ), |
| ಜೆ.ಎನ್.ಶ್ರೀನಿವಾಸಮೂರ್ತಿ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ದಕ್ಷಿಣ), (ಗೋವಿಂದರಾಜನಗರ), (ಘನತ್ಯಾಜ್ಯ), |
| ಎಂ.ಮಹದೇವ – ಸದಸ್ಯರು | |
| ಪದ್ಮಾವತಿ ನರಸಿಂಹಮೂರ್ತಿ – ಸದಸ್ಯರು | ಅಧೀಕ್ಷಕ ಅಭಿಯಂತರರು (ದಕ್ಷಿಣ), |
| ಮಮತ ಕೆ.ಬಿ. ವಾಸುದೇವ – ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ), |
| ಎಂ.ಪದ್ಮಾವತಿ ಶ್ರೀನಿವಾಸ್ – ಸದಸ್ಯರು | ಸಂಬಂಧಪಟ್ಟ ಅಧಿಕಾರಿಗಳು |
| ಎನ್.ಲೋಕೇಶ್ – ಸದಸ್ಯರು | --- |
| ಎಂ. ಶಶಿರೇಖಾ – ಸದಸ್ಯರು | -- |
| ಬಿ.ಸುಮಂಗಲ – ಸದಸ್ಯರು | - |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

***01]. ವಿಷಯದ ಸಂಖ್ಯೆ: ತೆಆಸ್ಥಾಸ/135/2016-17***

ಆಯುಕ್ತರ ಟಿಪ್ಪಣಿ ದಿನಾಂಕ: 06.02.2017ರ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2016-17ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2017-18ನೇ ಸಾಲಿನ ಕರಡು ಆಯವ್ಯಯ ಅಂದಾಜು ಪಟ್ಟಿಯ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**-ಚರ್ಚೆಗಾಗಿ ಮುಂದೂಡಿದೆ-**

***ಸುಮೋಟೋ ನಿರ್ಣಯ:-***

***02]. ವಿಷಯದ ಸಂಖ್ಯೆ: ತೆಆಸ್ಥಾಸ/140/2016-17***

**ನಿರ್ಣಯ:** 2016-17ನೇ ಸಾಲಿನ ಆಯವ್ಯಯದ ವಿವಿಧ ಲೆಕ್ಕಶೀರ್ಷಿಕೆಗಳಲ್ಲಿ ಉಳಿತಾಯವಾಗಬಹುದಾದ ಅನುದಾನದಲ್ಲಿ ಅಧಿಕವಾಗಿ ಲೆಕ್ಕಶೀರ್ಷಿಕೆ ಮೀಸಲು ನಿಧಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಪಿ.2415ಕ್ಕೆ ಹೆಚ್ಚುವರಿ ಅನುದಾನ ರೂ.35.00 ಕೋಟಿ ಅನುದಾನವನ್ನು ಕೆ.ಎಂ.ಸಿ. ಕಾಯಿದೆ ಸೆಕ್ಷನ್ 172ರ ಅನ್ವಯ ವರ್ಗಾವಣೆ ಮಾಡಿ ಒದಗಿಸಲು ಆಯುಕ್ತರು ಕ್ರಮಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.

***ಹೆಚ್ಚುವರಿ ವಿಷಯ:-***

***03]. ವಿಷಯದ ಸಂಖ್ಯೆ: ತೆಆಸ್ಥಾಸ/141/2016-17***

ಆಯುಕ್ತರ ದಿನಾಂಕ: 13-02-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೆಂಗಳೂರು ಮಹಾನಗರ ಜಿಲ್ಲೆ, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ:-118 ರಲ್ಲಿ ಕಾರ್ಯನಿರ್ವಹಿಸುತ್ತಿರುವ ಹೆಚ್.ಸಿದ್ದಯ್ಯ ರಸ್ತೆ ರೆಫರಲ್ ಆಸ್ಪತ್ರೆಯಲ್ಲಿ Hi-Tech Laboratory ಪ್ರಾರಂಭಿಸಲು NUHM ಅನುದಾನದಡಿಯಲ್ಲಿ, ಕರ್ನಾಟಕ ಸರ್ಕಾರದ KSDLWS ಸಂಸ್ಥೆಯ ವತಿಯಿಂದ ವಿವಿಧ ಯಂತ್ರೋಪಕರಣಗಳನ್ನು ಖರೀದಿಸಿ ಸದರಿ ಆಸ್ಪತ್ರೆಗೆ ಸರಬರಾಜು ಮಾಡಲಾಗಿದೆ. ಇದರ ಜೊತೆಗೆ ಸದರಿ ಆಸ್ಪತ್ರೆಯಲ್ಲಿ SNCU (Sick Neonatal Care Unit) ಪ್ರಾರಂಭಿಸಲು ಯಂತ್ರೋಪಕರಣಗಳನ್ನು ಸರಬರಾಜು ಮಾಡಲಾಗುತ್ತಿದೆ.

ಈ ಎರಡೂ ಪ್ರಮುಖ ವಿಭಾಗಗಳ (Hi-Tech Laboratory ಹಾಗೂ SNCU) ಕಾರ್ಯಾರಂಭ ಮಾಡಲು ಒಟ್ಟಾರೆ 150 KVA ವಿದ್ಯುತ್ ಸಂಪರ್ಕ ಹೆಚ್ಚುವರಿಯಾಗಿ ಬೇಕಾಗಿದೆ. ಪ್ರಸ್ತುತ BESCOM ನಿಯಮಾವಳಿಗಳ ಸನುಸಾರ 60 KVA@0.8P ಗಳಿಗಿಂತ ವಿದ್ಯುತ್ ಬೇಡಿಕೆ ಹೆಚ್ಚಿದ್ದರೆ 11 KV HT/435 Volt LT ವಿದ್ಯುತ್ ಪಡೆಯಲು HT Meeting ನೊಡನೆ ಪರಿವರ್ತಕವನ್ನು ಅಳವಡಿಸಿಕೊಳ್ಳಬೇಕಾಗಿರುತ್ತದೆ. ಈ ಕಾರ್ಯಕ್ಕಾಗಿ ದಕ್ಷಿಣ ವಲಯದ ಕರ್ಯಪಾಲಕ ಅಭಿಯಂತರರುಗಳು ರೂ: 48 ಲಕ್ಷ ಮೊತ್ತದ ಅಂದಾಜು ಪಟ್ಟಿ ನೀಡಿರುತ್ತಾರೆ ಹಾಗೂ ಇದಕ್ಕಾಗಿ ಯಾವುದೇ ರೀತಿಯ ಅನುದಾನ ವಿದ್ಯುತ್ ವಿಭಾಗದಲ್ಲಿ ಲಭ್ಯವಿಲ್ಲವೆಂದು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಆಯವ್ಯಯದ 14-ಆರೋಗ್ಯ ವೈದ್ಯಕೀಯ ವಿಭಾಗದ ಅಡಿಯಲ್ಲಿ ಆರೋಗ್ಯ ಇಲಾಖೆಯ ಈ ಕೆಳಕಂಡ ಲೆಕ್ಕಶೀರ್ಷಿಕೆಗಳ ಪಿ-ಕೋಡ್‌ಗಳಲ್ಲಿ 2016-17ನೇ ಸಾಲಿಗೆ ಮೀಸಲಿರಿಸಿರುವ ಅನುದಾನದಲ್ಲಿ ಯಾವುದೇ ವೆಚ್ಚ ಭರಿಸಿಲ್ಲದಿರುವ ಬಗ್ಗೆ ಮುಖ್ಯ ಲೆಕ್ಕಾಧಿಕಾರಿಗಳಿಂದ ದೃಢೀಕರಣ ಪಡೆಯಲಾಗಿದೆ. ವಿವರಗಳು ಕೆಳಗಿನಂತಿವೆ.

| ಲೆಕ್ಕ ಶೀಷಿಕೆ | ಮೀಸಲಿಟ್ಟಿರುವ ಮೊತ್ತ (ರೂ. ಲಕ್ಷಗಳು) |
|---|---|
| 14 ಆರೋಗ್ಯ ವೈದ್ಯಕೀಯ | |
| ಪಿ0503 ಏಡ್ಸ್ ಕಾರ್ಯಕ್ರಮ ವೆಚ್ಚಗಳು | 5.00 |
| ಪಿ0107 ಸಿಬ್ಬಂಧಿಗೆ ತರಬೇತಿ | 30.00 |
| ಪಿ0062 ಕ್ಯಾನ್ಸರ್, ಗೈನೋ, ಇತರೆ ವೈದ್ಯಕೀಯ ಸೇವೆಗಳು | 2.00 |
| ಪಿ2259 ಆರೋಗ್ಯದ ಅರಿವಿನ ಸಾಕ್ಷ್ಯ ಚಿತ್ರಗಳ ವೆಚ್ಚ | 10.00 |
| ಪಿ0092 ಪುಸ್ತಕಗಳ ಖರೀಧಿ | 1.00 |
| ಒಟ್ಟು ಮೊತ್ತ | 48.00 |

ಆದುದರಿಂದ ಹೆಚ್.ಸಿದ್ದಯ್ಯ ರಸ್ತೆ ರೆಫರಲ್ ಆಸ್ಪತ್ರೆಯ Hi-Tech Laboratory ಹಾಗೂ SNCU ವಿಭಾಗಗಗಲ್ಲಿನ ವಿವಿಧ, ಬೆಲೆಬಾಳುವ ಯಂತ್ರೋಪಕರಣಗಳ ಕಾರ್ಯಾರಂಭಕ್ಕೆ ಅತೀ ಅವಶ್ಯವಾಗಿರುವ ವಿದ್ಯುತ್ ಸೌಲಭ್ಯಗಳ ಮರುನವೀಕರಣ ಹಾಗೂ HT Meeting ಪರಿವರ್ತಕ ಅಳವಡಿಕೆಗೆ ಬೇಕಾಗಿರುವ ರೂ. 48.00ಲಕ್ಷ (ನಲವತ್ತೆಂಟು ಲಕ್ಷ ರೂಪಾಯಿ) ಗಳ ಅನುದಾನದ ಮೊತ್ತವನ್ನು, ಪಾಲಿಕೆಯ ಆಯವ್ಯಯದ 14–ಆರೋಗ್ಯ ವೈದ್ಯಕೀಯ ವಿಭಾಗದ 2016–17ನೇ ಸಾಲಿನ ಮೇಲ್ಕಂಡ ಪಿ–ಕೋಡ್‌ಗಳಲ್ಲಿ ಮೀಸಲಿಡಲಾಗಿರುವ ಹಾಗೂ ತಹಲ್‌ವರೆಗೆ ವೆಚ್ಚವಾಗದೇ ಇರುವ ಮೊತ್ತದೊಂದಿಗೆ ಮರು ಹೊಂದಾಣಿಕೆಗಾಗಿ ಟಿಪ್ಪಣಿ ತಯಾರಿಸಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಗಾಗಿ ಟಿಪ್ಪಣಿಯೊಂದಿಗೆ ಕಡತ ಸಲ್ಲಿಸಿದೆ.

**ನಿರ್ಣಯ: ಆಯುಕ್ತರ ದಿನಾಂಕ: 13.02.2017ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

(ಎಂ.ಕೆ. ಗುಣಶೇಖರ್)
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**